**ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ವಾದಿ ಪರ ಶ್ರೀ. ಡಿ .ಎಸ್ . ಬಿ ವಕೀಲರಿಂದಃ**

ನಾನು ಮತ್ತು ಪ್ರತಿವಾದಿ ಇಬ್ಬರೂ ಖಾಯಂ ತರೀಖವಾಗಿ ಬೆಟಗೇರಿ ಗ್ರಾಮದ ನಿವಾಸಿಗಳು ಎಂದರೆ ನಿಜ. ವಾದಿಯ ಪರಿಚಯ ಇದೆ. ವಾದಿಯು ಪ್ರತಿವಾದಿಯ ವಿರುದ್ಧ ಖರೀದಿ ಕರಾರು ಪತ್ರದಂತೆ ದಾವಾ ಆಸ್ತಿಯ ಖರೀದಿ ಪತ್ರವನ್ನು ಬರೆದುಕೊಡಲು ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆಂದರೆ ನಿಜ. ಖರೀದಿ ಕರಾರು ಪತ್ರದಂತೆ ದಾವಾ ಆಸ್ತಿಯು ಸರ್ವೆ ನಂಬರ 71/1 ರ ಪೈಕಿ 02 ಎಕರೆ ಇರುತ್ತದೆಂದರೆ ನಿಜ. ದಾವಾ ಆಸ್ತಿಯ ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ- ಹಳ್ಳ, ಪಶ್ಚಿಮಕ್ಕೆ- ಕಟಾವಕರವರ ಜಮೀನು ಹಾಗೂ ಪೂರ್ವಕ್ಕೆ -ಪ್ರತಿವಾದಿಯ ಉಳಿದ ಜಮೀನು ಇರುತ್ತದೆ. ಪ್ರತಿವಾದಿ ವಾದಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರವನ್ನು ನಾನು ನೋಡಿಲ್ಲ ಆದರೆ ಆ ಬಗ್ಗೆ ಕೇಳಿರುತ್ತೇನೆ. ಸದರಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಹಾಕಿಲ್ಲ. ಖರೀದಿ ಪತ್ರ ಮಾಡಿಕೊಳ್ಳಲು ಎಷ್ಟು ವರ್ಷದ ಅವಧಿಯನ್ನು ನಿಗದಿಪಡಿಸಿರುತ್ತಾರೆಂದರೆ ಸಾಕ್ಷಿಯು ಒಂದು ಅಥವಾ ಎರಡು ವರ್ಷದ ಅವಧಿಯನ್ನು ನಿಗದಿಪಡಿಸಿರಬಹುದು. ದಾವಾ ಆಸ್ತಿಯ ಕಿಮ್ಮತ್ತನ್ನು ರೂ.8,20,000/- ಮಾಡಿರುತ್ತಾರೆಂದರೆ ಸಾಕ್ಷಿಯು ಹೆಚ್ಚಿಗೆ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ರೂ.8,20,000/- ರ ಪೈಕಿ ವಾದಿಯು ಪ್ರತಿವಾದಿಗೆ ರೂ.8,00,000/- ಕೊಟ್ಟಿರುತ್ತಾಳೆಂದರೆ ಸಾಕ್ಷಿಯು ರೂ.4,00,000/- ಗಳನ್ನು ಕೊಟ್ಟಿರುವುದಾಗಿ ಪ್ರತಿವಾದಿ ನನಗೆ ಹೇಳಿರುತ್ತಾನೆಂದು ನುಡಿಯುತ್ತಾರೆ. ಉಳಿದ ರೂ.20,000/- ಹಣವನ್ನು 03 ವರ್ಷದ ಒಳಗೆ ಕೊಟ್ಟು ಖರೀದಿ ಪತ್ರ ಮಾಡಿಸಿಕೊಳ್ಳುವ ಕರಾರು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಕರಾರು ಪತ್ರದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

ದಾವಾ ಜಮೀನು ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆಂದು ನಾನು ದಾಖಲೆಯನ್ನು ನೋಡಿರುವುದಿಲ್ಲ. ಪ್ರತಿವಾದಿಗೆ ಮನೆತನದ ಅಡಚಣೆ ಏನು ಇತ್ತು ಎಂದರೆ ಸಾಕ್ಷಿಯು ಪ್ರತಿವಾದಿ ವಾದಿಯಿಂದ ರೂ.4,00,000/- ಗಳನ್ನು ಪಡೆದುಕೊಂಡ ಬಗ್ಗೆ ಮಾತ್ರ ಹೇಳಿದ್ದು, ಮನೆತನದ ಅಡಚಣೆ ಏನು ಇತ್ತೆಂದು ನನಗೆ ಹೇಳಿರುವುದಿಲ್ಲ. ಪ್ರತಿವಾದಿಯ ಮಗ ಹೇಳಿದಂತೆ ನಾನು ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯಿಂದ ರೂ.4,00,000/- ಹಣವನ್ನು ಪಡೆದುಕೊಂಡ ಬಗ್ಗೆ ಆತನ ಮಗ ಸನ್ 2017 ರಲ್ಲಿ ಹೇಳಿರುತ್ತಾನೆ. ಸದರಿ ಹಣವನ್ನು ಪ್ರತಿವಾದಿಯ ಮಗನು ಮನೆಯ ಅಡಚಣೆ ಸಲುವಾಗಿ ವಾದಿಯಿಂದ ಪಡೆದುಕೊಂಡಿರುತ್ತಾನೆ. ಸದರಿ ರೂ.4,00,000/- ಹಣಕ್ಕೂ ಹಾಗೂ ಪ್ರಸ್ತುತ ದಾವೆಗೂ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ರೂ.4,00,000/- ಹಣವನ್ನು ಮರಳಿ ಪ್ರತಿವಾದಿಯು ವಾದಿಗೆ ಕೊಟ್ಟಿದ್ದು, ಅಲ್ಲದೇ ಬಡ್ಡಿ ಹಣ ರೂ. 50,000/- ಕೊಟ್ಟಿರಬಹುದು. ಸದರಿ ಹಣವನ್ನು ಮರಳಿ ಕೊಟ್ಟ ಬಗ್ಗೆ ವಾದಿಯಿಂದ ರಸೀದಿ ಅಥವಾ ಯಾವುದೇ ಪತ್ರವನ್ನು ಬರೆಸಿಕೊಂಡಿರುವುದಿಲ್ಲ. ಖರೀದಿ ಕರಾರು ಪತ್ರದಲ್ಲಿ ಹಣವನ್ನು ಮರಳಿ ಕೊಟ್ಟ ಬಳಿಕ ರದ್ದುಪಡಿಸಿಕೊಳ್ಳುವ ಬಗ್ಗೆ ಒಕ್ಕಣಿ ಇರುತ್ತದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ವಾದಿಗೆ ತಾನು ಪಡೆದುಕೊಂಡ ಹಣದ ಭದ್ರತೆಗಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ದಾವಾ ಜಮೀನನ್ನು ಮಾರಾಟ ಮಾಡುವ ಉದ್ದೇಶದಿಂದ ಬರೆದುಕೊಟ್ಟಿರುತ್ತಾನೆಂದರೆ ಸರಿಯಲ್ಲ. ವಾದಿ ಪ್ರತಿವಾದಿಯಿಂದ ಮರಳಿ ಹಣ ಪಡೆದುಕೊಂಡು ಖರೀದಿ ಕರಾರು ಪತ್ರವು ಕಳೆದುಹೋಗಿದ್ದು, ಅದು ಸಿಕ್ಕ ನಂತರ ಖರೀದಿ ಕರಾರು ಪತ್ರದ ರದ್ಧತಿ ಪತ್ರವನ್ನು ಬರೆದುಕೊಡುತ್ತೇನೆಂದು ಹೇಳಿರುತ್ತಾಳೆಂದು ಪ್ರತಿವಾದಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ

**ಅಸಲ ದಾವಾ ನಂ:64/2022, ಡಿ.ಡಬ್ಲು.2**

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಮದ್ಯೆ ನಿಪಿ.1 ರಂತೆ ಆದ ಖರೀದಿ ಕರಾರು ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಪ್ರತಿವಾದಿಯು ವಾದಿಗೆ ನನ್ನ ಸಮಕ್ಷಮ ರೂ.4,00,000/- ಹಾಗೂ ಬಡ್ಡಿ ಹಣವನ್ನು ಕೊಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.1 ರಂತೆ ದಾವಾ ಆಸ್ತಿಯನ್ನು ಪ್ರತಿವಾದಿಯು ವಾದಿಗೆ ಖರೀದಿ ಪತ್ರ ಮಾಡಿ ಕೊಡುವುದನ್ನು ತಪ್ಪಿಸಲು ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ನಷ್ಟವನ್ನುಂಟು ಮಾಡಲು ಪ್ರತಿವಾದಿಯ ಮಗನ ಮಾತನ್ನು ಕೇಳಿಕೊಂಡು ಸುಳ್ಳು ಸಂಗತಿಗಳ್ಳುಳ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ